ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಖರೀದಿ ಮಾಡುವುದು.

2751 (3252) ಶ್ರೀ ರಾಮದಾಸ್.ಎ (ಕೃಷ್ಣರಾಜ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಖರೀದಿಸಲು ವಾರ್ಷಿಕ ಎಷ್ಟು ಹಣ ನೀಡಲಾಗುತ್ತಿದೆ; ಕನ್ನಡ ಪುಸ್ತಕಗಳ ಖರೀದಿಗೆ ಎಷ್ಟು ಹಣ ಮತ್ತು ಇಂಗ್ಲೀಷ್ ಪುಸ್ತಕಗಳಿಗೆ ಎಷ್ಟು ಹಣ ನೀಡಲಾಗುತ್ತಿದೆ;

ಆ) ರಾಜ್ಯದಲ್ಲಿರುವ ಲೈಬ್ರರಿಗಳ ಸಂಖ್ಯೆ ಎಷ್ಟು ಈ ಲೈಬ್ರರಿಗಳಲ್ಲಿ ಓದಲು ಇರುವ ಪುಸ್ತಕಗಳ ಸಂಖ್ಯೆ ಎಷ್ಟು; ಎಷ್ಟು ಜನ ಇದರ ಲಾಭ ಪಡೆಯುತ್ತಿದ್ದಾರೆ;

ಇ) ಮೈಸೂರು ಸೆಂಟ್ರಲ್ ಲೈಬ್ರರಿ ಯಾವಾಗ ಪ್ರಾರಂಭವಾಯಿತು; ಎಷ್ಟು ಪುಸ್ತಕಗಳನ್ನು ಹೊಂದಿದೆ; ಈ ಲೈಬ್ರರಿಗೆ ಸ್ಥಳದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಲೈಬ್ರರಿಗೆ ನೀಡುತ್ತಿರುವ ಹಣ ಎಷ್ಟು;

ಈ) ಮೈಸೂರು ನಗರಪಾಲಿಕೆಯಿಂದ ಲೈಬ್ರರಿ ಸೆಸೆ ರೂಪದಲ್ಲಿ ಕಳೆದ 10 ವರ್ಷಗಳಲ್ಲಿ ಸಂಗ್ರಹವಾದ ಹಣವೆಷ್ಟು;

ಉ) ಮೈಸೂರು ಲೈಬ್ರರಿಗೆ ಹೊಸ ಕಟ್ಟಡ ಕಟ್ಟುವ ಯೋಜನೆ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಯಾವಾಗ ಕಾರ್ಯಾರಂಭ ಮಾಡಲಾಗುವುದು.

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಒಟ್ಟು 3.27 ಕೋಟಿ ಹಣ ನೀಡಲಾಗಿದೆ. ಇದರಲ್ಲಿ ಶೇಕಡ 80 ರಂತೆ;

ಕನ್ನಡ ಪುಸ್ತಕಗಳಿಗೆ	:2.61 ಕೋಟಿ
ಇಂಗ್ಲೀಷ್ ಗ್ರಂಥಗಳಿಗೆ ಶೇಕಡ 10 ರಂತೆ	:0.33 ಕೋಟಿ
ಇತರ ಭಾಷೆ ಶೇಕಡ 10 ರಂತೆ	: 0.33 ಕೋಟಿ

ಆ) ಒಟ್ಟು ಗ್ರಂಥಾಲಯಗಳ ಸಂಖ್ಯೆ 2755

ಒಟ್ಟು ಪುಸ್ತಕಗಳ ಸಂಖ್ಯೆ	-90.00ಲಕ್ಷ
ಓದುಗರ ಸಂಖ್ಯೆ	-5.2 ಲಕ್ಷ

ಇ) ಪ್ರಾರಂಭವಾದ ದಿನಾಂಕ 10-11-1963. ಒಟ್ಟು ಪುಸ್ತಕಗಳು -4,08,730. ಸ್ಥಳದ ಕೊರತೆ ಗಮನಕ್ಕೆ ಬಂದಿದೆ. ಅಭಿವೃದ್ಧಿ ಮತ್ತು ಇತರ ಕಾರ್ಯಕ್ರಮಕ್ಕೆ ರೂ. 32.00.

ಈ) 83.22 ಲಕ್ಷ (ಪಟ್ಟಿ ಲಗತ್ತಿಸಿದೆ)

ಉ) ಹೌದು. ಆದಷ್ಟು ಬೇಗನೆ.

ಮೈಸೂರು ನಗರ ಪಾಲಿಕೆಯಿಂದ ಲೈಬ್ರರಿ ಸೆಸ್ ರೂಪದಲ್ಲಿ ಕಳೆದ 10 ವರ್ಷಗಳಲ್ಲಿ ಸಂಗ್ರಹವಾದ ಹಣ.

ವರ್ಷ	ರೂ.
1990-91	3,13,106-65
1991-92	5,58,007-00
1992-93	7,41,762-00
1993-94	13,59,482-00
1994-95	4,34,096-00
1995-96	5,53,000-00
1996-97	3,07,000-00
1997-98	9,83,478-00
1998-99	115,35,891-00
1999-2000	15,35,958-00
ಒಟ್ಟು ರೂ.	**83,21,690-00**

ಗ್ರಾಮೀಣ ನೀರು ಸರಬರಾಜು ಯೋಜನೆಯ ದುರಸ್ತಿಗಾಗಿ ವೆಚ್ಚ ಮಾಡಿರುವ ಹಣ

2752 (3246) ಶ್ರೀ ರಾಜುಗೌಡ ಜೆ. (ಹನೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯಿತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 4 ವರ್ಷಗಳಲ್ಲಿ (1996-97, 1997-98 1998-99, 1999-2000) ರಾಜ್ಯ ಸರ್ಕಾರವು ಗ್ರಾಮೀಣ ನೀರು ಸರಬರಾಜು ಯೋಜನೆಯ ಅಡಿ ದುರಸ್ತಿಗಾಗಿ ವೆಚ್ಚ ಮಾಡಿದ ಹಣವೆಷ್ಟು? ಜಿಲ್ಲಾವಾರು ವಿವರ ನೀಡುವುದು)

ಆ) 1996ರಿಂದ ಈ ಯೋಜನೆಗಳಲ್ಲಿ ಸಾಧಿಸಿದ ಸಾಧನೆ ಎಷ್ಟು?

ಇ) ಪ್ರಸಕ್ತ ವರ್ಷದಲ್ಲಿ ಈ ಕಾರ್ಯಕ್ರಮದಡಿ ಆಯವ್ಯಯದಲ್ಲಿ ಒದಗಿಸಲಾದ ಹಣ ಎಷ್ಟು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಅ) ವಿವರಗಳನ್ನು ಅನುಬಂಧ- 1ರಲ್ಲಿ ನೀಡಲಾಗಿದೆ.